ಉದ್ವೇಗ ಅಷ್ಟೇ. ಸ್ವಲ್ಪ ವಿಶ್ರಾಂತಿ ತೆಗೆದುಕೊಂಡರೆ ಎಲ್ಲಾ ಸರಿಯಾಗುತ್ತೆ ಬಿಡಿ.” ಎಂದರು.

ಡಾಕ್ಟರನನ್ನೂ ತನ್ನ ಜಾಲದಲ್ಲಿ ಕೆಡವಿಕೊಂಡಿದ್ದೇನೆಂದು ಯೋಚಿಸಿ ಸ್ಪೆನ್ಸರ್ ಹೊದಿಕೆಯೊಳಗೇ ನಗತೊಡಗಿದ. ಮುಂದಿನ ನಡೆಯನ್ನು ಅವನು ಮೆಲುಕುಹಾಕತೊಡಗಿದ. ಇನ್ನು ಮೂರು ದಿನಗಳಲ್ಲಿ ಅವನ ಆರೋಗ್ಯ ಮತ್ತೂ ಬಿಗಡಾಯಿಸುವುದು ಖಂಡಿತ. ಡಾಕ್ಟರರಿಗೆ, “ಯಾಕೋ ಹೆದರಿಕೆಯಾಗುತ್ತಿದೆ ಡಾಕ್ಟರ್. ನನ್ನ ಭ್ರಮೆ ಇದ್ದರೂ ಇರಬಹುದು, ಬಾಯಿಗೆ ಏನೂ ರುಚಿ ಹತ್ತುತ್ತಿಲ್ಲ. ಹೊಟ್ಟೆ ನುಲಿದಂತೆ, ವಾಂತಿಯಾಗುತ್ತಿರುವಂತೆ ಭಾಸವಾಗುತ್ತಿದೆ. ಮಲವಿಸರ್ಜನೆಯೂ ಅಷ್ಟೇ... ಒಮ್ಮೆ ಪರೀಕ್ಷೆಗೆ ಕಳಿಸಿ ಡಾಕ್ಟರ್...”

ಅವನ ಮಲದಲ್ಲಿ ಕೊಂಚ ‘ಆರ್ಸೆನಿಕ್’ ಅಂಶ ಇದ್ದು ಇತರ ವಸ್ತುಗಳಲ್ಲಿ ಹೆಚ್ಚೇ ಇರುವುದು! ಅವನ ಮಡದಿಯ ದೇಹದಲ್ಲೂ ಆರ್ಸೆನಿಕ್ ಸೇರಿಕೊಂಡಿತ್ತು. ಈಗ ‘ತನಗೂ ಯಾರೋ ಆರ್ಸೆನಿಕ್ ಉಣಿಸುತ್ತಿದ್ದಾರೆ! ಬೇರೆ ಯಾರು? ಹನ್ನಾಳ ಕೃತ್ಯವೇ ಇರಬೇಕು!’ ಅವನ ಮುಖದಲ್ಲೊಂದು ವಿಕೃತ ನಗು ಮೂಡಿತು. ಅವಳು ತನ್ನ ತಂಗಿಗೆ ಬರೆದಿರುವ ಪತ್ರ ಅವಳಿಗೇ ಮುಳುವಾಗುವುದರಲ್ಲಿ ಸಂಶಯವಿಲ್ಲ! ಅವನು ನೇಯ್ದಿರುವ ಬಲೆಯಿಂದ ಇಂತ ನೂರು ಪತ್ರಗಳೂ ಅವಳನ್ನು ರಕ್ಷಿಸಲಾರವು! ಇದರೊಟ್ಟಿಗೆ ತನ್ನ ಹೆಂಡತಿಯ ಸಾವೂ ಹನ್ನಾಳ ಕುತ್ತಿಗೆಗೆ ಸುತ್ತಿಕೊಳ್ಳುವುದರಲ್ಲಿ ಸಂಶಯವಿಲ್ಲ!

ರಾತ್ರಿ ಹತ್ತು ಗಂಟೆಗೆ ಅವನು ಕರೆಗಂಟೆಯನ್ನು ಒತ್ತಲು ಶುರು ಮಾಡಿದ. ಸುಮಾರು ಏಳೆಂಟು ಬಾರಿ ಒತ್ತಿದ ನಂತರವೇ ಹನ್ನಾ ಮೆಟ್ಟಿಲೇರಿ ಬರುವ ಸದ್ದು ಕೇಳಿಸಿತು.

“ನಿಮಗೇನಾಗಿದೆ?...” ಅಸಹನೆಯ ದನಿಯಲ್ಲಿ ಅವಳು ಕೇಳಿದಳು.

ಏದುಸಿರು ಬಿಡುತ್ತಾ ಅವನು ಅಸ್ಪಷ್ಟ ದನಿಯಲ್ಲಿ, “ಯಾಕೋ ಆರೋಗ್ಯ ತೀರಾ ಬಿಗಡಾಯಿಸುತ್ತಿರುವಂತೆ ಕಾಣುತ್ತದೆ. ಈಗಿಂದೀಗಲೇ ಡಾಕ್ಟರರನ್ನು ಕರೆದುಕೊಂಡು ಬಾ ಹನ್ನಾ.” ಎಂದ.

“ಈ ಹೊತ್ತಿನಲ್ಲಿ? ನನ್ನಿಂದಾಗದು...” ಅವಳು ಸಿಟ್ಟಿನಿಂದ ಪ್ರತಿಭಟಿಸಿದಳು.

“ನಾನು ಸಾಯುತ್ತಿದ್ದೇನೆ ಹನ್ನಾ! ಬೇಗ, ಬೇಗ.” ಅವನು ಗೋಗರೆದ.

“ನಿಮಗೆ ಅಂತಾದ್ದು ಏನೂ ಆಗಿಲ್ಲ. ಬೆಳಿಗ್ಗೆ ಎಲ್ಲಾ ಸರಿಹೋಗುತ್ತದೆ.”

“ನಾನು ಸಾಯ್ತಾ ಇದ್ದೀನಿ ಹನ್ನಾ...” ಅವನು ನರಳಿದ. ಹೊರಗೆ ಒಂದೇ ಸಮನೆ ಮಳೆ ಹುಯ್ಯುತ್ತಿತ್ತು. ಗಾಳಿ ಆರ್ಭಟಿಸುತ್ತಿತ್ತು. ಡಾಕ್ಟರರ ಮನೆ ಆ ನಿರ್ಜನ ರಸ್ತೆಯಲ್ಲಿ ಮೈಲಿ ದೂರದಲ್ಲಿತ್ತು.

“ನಾನು ಚಳಿಗೇ ಸತ್ತು ಹೋದೇನು...” ಹನ್ನಾ ಕ್ಷೀಣ ದನಿಯಲ್ಲಿ ಉಲಿದಳು.

‘ಅವನು ಸತ್ತರೆ ತನಗೆ ಏನೂ ಲಾಭವಿಲ್ಲ, ನಷ್ಟವೇ...’ ಎಂದು ಯೋಚಿಸುತ್ತಾ ಕೊನೆಗೆ “ಸರಿ, ಹೋಗುತ್ತೇನೆ.” ಎಂದು ಅವಡುಗಚ್ಚುತ್ತಾ ಹೇಳಿ ಹನ್ನಾ ದಢಾರನೆ ಬಾಗಿಲು ಮುಚ್ಚಿ ಹೊರಟು ಹೋದಳು.

ಸ್ಪೆನ್ಸರ್ ತೃಪ್ತಿಯಿಂದ ಮುಗುಳ್ನಕ್ಕ. ಕೆಳಗೆ ಹಜಾರದ ಬಾಗಿಲು ತೆರೆದು ಮುಚ್ಚಿದ ಶಬ್ದ ಕೇಳಿಸಿತು. ಮನೆಯಲ್ಲಿ ಮತ್ತೆ ನೀರವ ಮೌನ ನೆಲೆಸಿತು. ಅವನು ಈಗ ಏಕಾಂಗಿಯಾಗಿದ್ದ.

ಸ್ವಲ್ಪ ಹೊತ್ತು ಹಾಗೇ ಬಿದ್ದುಕೊಂಡಿದ್ದು ಸ್ವಲ್ಪ ಹೊತ್ತಿನ ನಂತರ ಎದ್ದು ಕುಳಿತು, ಗೌನನ್ನು ತೊಟ್ಟು ದಿಂಬಿನಡಿಗಿದ್ದ ಒಂದು ಬಿಳಿ ಪುಡಿಯ ಪೊಟ್ಟಣವನ್ನು ಹೊರತೆಗೆದು ಸ್ವಲ್ಪ ತಾನು ಅರ್ಧ ಕುಡಿದ ಟೀ ಕಪ್ಪಿನಲ್ಲೂ, ಮತ್ತೊಂದಿಷ್ಟು ತನ್ನ ಔಷಧಿಯೊಳಗೂ ಸೇರಿಸಿದ. ಅಷ್ಟರಲ್ಲಿ ಕೆಳಗೆ ಯಾವುದೋ ಅಸ್ಪಷ್ಟ ಸದ್ದು ಕೇಳಿಸಿದಂತಾಯಿತು. ಮರಗಟ್ಟಿದಂತಾಗಿ ಅವನು ಸ್ವಲ್ಪ ಹೊತ್ತು ಹಾಗೆಯೇ ನಿಂತುಕೊಂಡ.